ಬೆಂಗಳೂರು ವಿ.ವಿ. ಅಧ್ಯಯನ ಪ್ರವಾಸ ಪ್ರಾಯೋಜಿಸುವ ವ್ಯವಸ್ಥೆ ರದ್ದು ಮಾಡಿರುವುದು

2915 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿ ಹಂತದ ವಿದ್ಯಾರ್ಥಿಗಳ ಅಧ್ಯಯನ ಪ್ರವಾಸವನ್ನು ಪ್ರಾಯೋಜಿಸುವ ವ್ಯವಸ್ಥೆಯನ್ನು ರದ್ದುಪಡಿಸಲು ನಿರ್ಧರಿಸುವುದು ನಿಜವೇ?*

ಆ) *ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು? ವಿದ್ಯಾರ್ಥಿಗಳ ಅಧ್ಯಯನ ಪ್ರವಾಸಕ್ಕೆ ಕಳೆದ 3 ವರ್ಷಗಳಿಂದ ಆಗಿರುವ ವೆಚ್ಚದ ವಿವರಗಳನ್ನು ವರ್ಷವಾರು ನೀಡುವುದು?*

ಇ) *ಬೆಂಗಳೂರು ವಿಶ್ವ ವಿದ್ಯಾಲಯವು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಅದಕ್ಕೆ ಕಾರಣಗಳೇನು? ಎಷ್ಟು ಕೋಟಿ ರೂ.ಗಳ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ?*

ಈ) *ಬೆಂಗಳೂರು ವಿಶ್ವ ವಿದ್ಯಾಲಯವು ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಸರ್ಕಾರದ ಕಾರ್ಯ ಯೋಜನೆಗಳೇನು?*

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಶೈಕ್ಷಣಿಕ ಪರಿಷತ್ತಿನ ದಿನಾಂಕ 7-9-2000ದ ಸಭೆಯಲ್ಲಿ ನಿರ್ಧರಿಸಿದಂತೆ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ ಮತ್ತಿತರ ವಿಭಾಗಗಳಲ್ಲಿ ಅಧ್ಯಯನ ಪ್ರವಾಸವು ಅತ್ಯಗತ್ಯವಿದ್ದಲ್ಲಿ ಮಾತ್ರ ಇಲಾಖೆಯ ನಿಧಿಯಿಂದ ಕೈಗೊಳ್ಳಬಹುದು. ಇನ್ನಿತರ ವಿಭಾಗಗಳಲ್ಲಿ ಅಂತಹ ಪ್ರವಾಸಗಳನ್ನು ಕೈಬಿಡಲಾಗಿದೆ.

ಆ) ಕಠಿಣ ಆರ್ಥಿಕ ಪರಿಸ್ಥಿತಿಯಿಂದ

ವರ್ಷ	ಮೊತ್ತ
1997-98	16.77 ಲಕ್ಷ ರೂ.ಗಳು
1998-99	17.55 ಲಕ್ಷ ರೂ.ಗಳು
1999-2000	20.90 ಲಕ್ಷ ರೂ.ಗಳು

ಇ) ಹೌದು. ಪರಿಸರ ವಿಜ್ಞಾನ, ವಿದ್ಯುನ್ಮಾನ ವಿಜ್ಞಾನ ವಿಭಾಗದ ಹಾಗೂ ತುಮಕೂರು ಮತ್ತು ಕೋಲಾರ ಸ್ನಾತಕೋತ್ತರ ಕೇಂದ್ರಗಳ ಸ್ಥಾಪನೆಗಳಿಂದ ಕಾಲೇಜುಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ಹೆಚ್ಚಳದಿಂದಾಗಿ ಪರೀಕ್ಷಾ ವೆಚ್ಚ ಮತ್ತು ಮತ್ತಿತರ ವಸ್ತುಗಳ ವೆಚ್ಚದ ಹೆಚ್ಚಳದಿಂದ ಹಾಗೂ ಯುಜಿಸಿ : ಎಐಸಿಟಿಇ ವೇತನ ಪರಿಷ್ಕರಣೆಯಿಂದ. 138.39 ಲಕ್ಷ ರೂ.ಗಳು.

ಈ) ಈಗಾಗಲೇ ಸಾಧ್ಯವಾದಷ್ಟು ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.